International Journal of Kannada Research
www.kannadajournal.com

ISSN: 2454–5813
IJSR 2015; 1(3): 43-45
© 2015 IJKS
www.kannadajournal.com
Received: 10-11-2015
Accepted: 19-12-2015

**ಡಾ.ಬಾಳಪ್ಪ ಎಬಿ**
ಪ್ರಾಧ್ಯಾಪಕರು, ಕನ್ನಡ ವಿಭಾಗ, ಇಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು, ತುಮಕೂರು, ಕರ್ನಾಟಕ, ಭಾರತ

**Corresponding Auhtor:**
**ಡಾ.ಬಾಳಪ್ಪ ಎಬಿ**
ಪ್ರಾಧ್ಯಾಪಕರು, ಕನ್ನಡ ವಿಭಾಗ, ಇಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು, ತುಮಕೂರು, ಕರ್ನಾಟಕ, ಭಾರತ

# ಬಯಲೋಲ್ಲಾಸ: ಒಂದು ಪರಿಚಯ

**ಡಾ.ಬಾಳಪ್ಪ ಎಬಿ**

**ಪೀಠಿಕೆ**

ಕನ್ನಡದ ಜಗದ್ಗುರು, ಸಾಮಾನ್ಯರ ಸ್ವಾಮೀಜಿ, ಪುಸ್ತಕದ ಜಗದ್ಗುರು ಎಂದು ಜನತೆಯ ಪ್ರೀತಿ ವಿಶ್ವಾಸಗಳಿಂದ ಗುರುತಿಸುವ ಪೂಜ್ಯ ಡಾ.ತೋಂಟದ ಸಿದ್ದಲಿಂಗ ಸ್ವಾಮಿಗಳು ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಡಂಬಳ– ಗದಗದ ಪೀಠಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಒಂದು ಹೊಸ ಅಧ್ಯಾಯವೇ ಆರಂಭವಾದಂತಾಯ್ತು. ಗದ್ದುಗೆಯಲ್ಲಿ ಕುಳಿತ ಸಿದ್ದಲಿಂಗರ ಸುತ್ತ ಸಕಲ ಧರ್ಮೀಯರು ಪ್ರವೇಶ ಪಡೆದುದರಿಂದ ಹೊಸ ಚೈತನ್ಯ ಬಂದಂತಾಯಿತು. ಶ್ರೀಗಳ ಕಡಲಾಂತಃಕರಣಕ್ಕೆ ಬಂದು ಸೇರಿದುದು ಸಾವಿರಾರು ನದಿಗಳು. ಎಲ್ಲರನ್ನೂ ತನ್ನ ತೋಳ್ತೆಕ್ಕೆಯಲ್ಲಿ ಸೇರಿಸಿಕೊಂಡು ಪ್ರೀತಿಯ ಸೇತುವೆಯಾದರು.

**ಕಾವ್ಯರಚನೆಗೆ ಪ್ರೇರಣೆ ಮತ್ತು ಹಿನ್ನೆಲೆ**

ಮನುಷ್ಯ ಮನುಷ್ಯರ ನಡುವಿನ ಗೋಡೆಗಳನ್ನು ಕೆಡವಿ ಬಯಲುಗೊಳಿಸಿದ ಉಲ್ಲಾಸಮಯ ವ್ಯಕ್ತಿತ್ವದ ತೋಂಟದ ಶ್ರೀಗಳ ಚಿತ್ರಣವೇ 'ಬಯಲೋಲ್ಲಾಸ'. ಕವಿ ನಿರುಪಾಧೀಶರು. ವ್ಯಕ್ತಿಯೊಬ್ಬನನ್ನು ಇತಿಹಾಸದ ವ್ಯಕ್ತಿಗಳೊಂದಿಗೆ ಸಮೀಕರಿಸಿ ಬರಯುವುದು ಪ್ರಾಚೀನ ಕನ್ನಡ ಸಾಹಿತ್ಯದಿಂದ,ಊ ಕಂಡುಬರುತ್ತದೆ. ಆದರೆ ವ್ಯಕ್ತಿಯೊಬ್ಬ ಬದುಕಿರುವಾಗಲೇ ಆತನನ್ನು ಕಥಾನಾಯಕನನ್ನಾಗಿ ಕಾವ್ಯ ರಚಿಸಿರುವುದು ಅಪರೂಪವೇ ಸರಿ. ಬಯಲೋಲ್ಲಾಸವೆಂಬುದು ನಿರುಪಾಧೀಶರು ವಿರಚಸಿರುವ ಮಹಾಕಾವ್ಯವಾದರೂ ಇಲ್ಲಿನ ತ್ರಿಪದಿ, ಚೌಪದಿ, ಷಟ್ಪದಿ ಹಾಗೂ ವಚನಗಳನ್ನು ಅವಲೋಕಸಿದರೆ ಆಶುಕವಿತ್ವದ ಪ್ರತೀಕದಂತಿವೆ. ಪ್ರತೀ ಪದ್ಯದ ನಡುವೆ ಸಾವಯವ ಸಂಬಂಧದ ಕೊರತೆ ಅಲ್ಪಸ್ವಲ್ಪ ಕಂಡುಬರುತ್ತದೆ. ಈ ಕಾವ್ಯದಲ್ಲಿ 42 ಸೂಚನಾ ಪದ್ಯಗಳು, 42 ಷಟ್ಪದಿಗಳು, ಒಂದು ಚೌಪದಿ, ಹಾಗೂ ೪೯೩೧ ತ್ರಿಪದಿಗಳ 42 ಉಲ್ಲಾಸಗಳಿವೆ.

ಮಹಾಕಾವ್ಯಗಳ ಆರಂಭದಲ್ಲಿ ಪೂರ್ವಸೂರಿಗಳನ್ನು ನೆನೆದಂತೆ ಶರಣರ ನುಡಿಗಡಣವನ್ನು, ಉದಾತ್ತ ಶರಣರ ಚರಿತವನ್ನೂ ಸ್ಮರಿಸಿದ್ದಾರೆ. ಕಾವ್ಯದಲ್ಲಿರುವ ವಸ್ತುವಿಶೇಷವನ್ನು ಸರಳವೆನಿಸುವ ಆದರೆ ಸೊಬಗಿನಿಂದ ಕೂಡಿರುವಂತೆ ವರ್ಣಿಸಿದ್ದಾರೆ. ಕಾವ್ಯದ ಲಕ್ಷಣಗಳು ಅತ್ಯಂತ ಸೂಕ್ಷ್ಮವಾಗಿವೆ. ಚಿನ್ಮಯವೆನಿಸುವ ಚಿದ್ವಿಲಾಸದ ವಿಹಾರದಲ್ಲಿ ಉಪಹಾರವನ್ನು ಮೆದ್ದಂತೆ ಕಾಣಸುವ ಭಾವಕೋಶಗಳಿವೆ. ಸರಳವೆನಿಸುವ ಸಾತ್ವಿಕವಾದ ವಿನಯದ ಚರಿತ್ರೆಯನ್ನು ಕಟ್ಟುವುದರಿಂದ ಸಹೃದಯರು ಪ್ರಾಂಜಲ ಮನಸ್ಸಿನಿಂದ ಸ್ವೀಕರಿಸುವಂತಿದೆ. ಈ ಕಾವ್ಯವನ್ನು ವಿರಚಿಸಲು ಸತ್ಪ್ರೇರಣೆಯಾಗಿರುವ ಸಾಹಿತ್ಯ ಸಂಗೀತ, ಸಂಸ್ಕೃತಿಯ ವಕ್ತಾರರೆನಿಸಿರುವ ಲಿಂಗಾಯತ ಅಧ್ಯಯನ ಅಕಾಡೆಮಿ ಸ್ಥಾಪಿಸಿ ಪ್ರಕೀರ್ತಿತರಾದ ಮಹಾಶರಣರು ಈ ಮಹಾ ಕಾವ್ಯ ಬರೆಯಲು ಕಾರಣೀಭೂತರು ಎಂದು ಹೇಳಿಕೊಂಡಿದ್ದಾರೆ.

ಬಯಲೋಲ್ಲಾಸದ ನಾಯಕನ ಜನನವು ತಾವರೆಗೆ ಸೂರ್ಯೋದಯವು ಜೀವಾಳವಾದಂತೆ, ನೈದಿಲೆಗೆ ಚಂದ್ರನ ಆಗಮನವಾದಂತೆ, ನೋಟವು ಒಲಿದದವರಿಗೆ ಜೀವಾಳವಾದಂತೆ, ಮರಯ್ಯ, ಶಂಕ್ರಮ್ಮರಿಗೆ ಕೂಡಲಸಂಗನ ಶರಣರು ಬಂದು ದಾಸೋಹ ಸ್ವೀಕರಿಸಿದಂತೆ ಸಂತೋಷಪಡುತ್ತಾರೆ. ಅವನಿಗೆ ಸಿದ್ಧರಾಮನೆಂದು ನಾಮಕರಣ ಮಾಡುತ್ತಾರೆ. ದಿನಗಳೆದಂತೆ ಬೆಳದಿಂಗಳು ಬೆಳೆವಂತೆ ಸಿದ್ದರಾಮನು ಬೆಳಗುತ್ತಲೇ ಬೆಳೆಯುತ್ತಾನೆ. ಚರಿತನಾಯಕನಾದ ಸಿದ್ದರಾಮನ ತಂದೆಯ ಹಿರಿಯಣ್ಣ ಲಿಂಗಯ್ಯನನ್ನು ಬೀಳೂರ ಗುರುಬಸವ ಚರರು ಭೇಟಿ ಮಾಡಿ ಅವನೊಳಗಿರುವ ಆಂತರಿಕ ಶಕ್ತಿಯನ್ನು ಮನಗಂಡು ಹಾನಗಲ್ಲ ಕುಮಾರಸ್ವಾಮಿಗಳು ಸ್ಥಾಪಿಸಿದ ಶಿವಯೋಗಮಂದಿರವನ್ನು ಪ್ರಸಿದ್ದಿಗೊಳಿಸುವಂತೆ ಪೂಜಾಮರಿಯನ್ನಾಗಿಸುವರು.

ಶಾಂತವೀರರಾಗಿ ಲಿಂಗದೀಕ್ಷೆಯಾದ ಮೇಲೆ ಸಿದ್ದರಾಮನನ್ನು ಶಂಕ್ರಮ್ಮಳು ಮನೆಯೇ ಮೊದಲ ಪಾಠಶಾಲೆ ಜನನಿ ತಾನೇ ಮೊದಲ ಗುರುವಾಗಿದ್ದಾಳೆ.

**ಕಾವ್ಯದ ಮಹತ್ವ**

ಮುಂದೆ ಸಕಲ ವಿದ್ಯಾಪಾರಂಗತನಾಗಿಸಲು ಸಿಂಧಗಿಯಿಂದ ಶಿವಯೋಗಮಂದಿರದವರೆಗೆ ಆತನ ವಿದ್ಯಾಭ್ಯಾಸವು ಮುಂಂದುವರೆಯುತ್ತದೆ. ಶಿವಯೋಗ ಮಂದಿರದಲ್ಲಿ ಸುವಿಚಾರನಿರತನಾಗಿ ಸದ್ವಿದ್ಯೆಯನ್ನು ಕಲಿಯುತ್ತಾನೆ. ಆಧ್ಯಾತ್ಮಕ್ಕೆ ಇಂಬು ನೀಡಿದಂತೆ ಸಿಂಧಗಿಯ ಸಿಂಧೂರ ಚರಮೂರ್ತಿಯ ಸತ್ಸೇವೆಗೆ ತೊಡಗಿಕೊಳ್ಳುತ್ತಾನೆ. ಸಿದ್ಧರಾಮರ ದೇವರಧ್ಯಯಯನವು ಸಂಪದ್ಭರಿತವಾದುದು. ಹುಬ್ಬಳ್ಳಿಯ ಮೂರುಸಾವಿರ ಮಠದ ಮೂಜಗಂ ಅಧಿಪತಿಗಳ ಸಾನಿಧ್ಯದಲ್ಲಿಯೂ ವಿದ್ಯಾಭ್ಯಾಸ ಮುಂದುವರಿಸುತ್ತಾರೆ. ನಿಜಗುಣರ ಸಂದೇಶದಂತೆ ಈತ ಶರಣದರ್ಶನ ಪಡೆದು ಪುಣ್ಯವರಿತು ಗದಗಿನ ಕಡೆಗೆ ಹೊರಟು ನಿಲ್ಲುತ್ತಾರೆ.

ಗದಗಿನ ತೋಂಟದಾರ್ಯ ಮಠದಲ್ಲಿ ಸತ್ಪಥಿಕನ ನಿತ್ಯವಿಧಿಯಂತೆ ಬದ್ದತೆಯಿಂದ ಅಮಲ ಜ್ಞಾನವನ್ನು ಭಕ್ತಿಯ ನುಡಿನೈದಿಲೆಯಾಗಿ ಪರಿವರ್ತನೆಯಗುತ್ತದೆ. ಆಚಾರವೆಲ್ಲ ಸದಾಚಾರದ ತವನಿಧಿಯಾಗುತ್ತ ಮಹಾಮನೆಯ ರಚಿಸಿ ಪಾತ್ರಾಂಗ, ಸೂತ್ರಾಂಗ, ಭಾಷ್ಯಾಂಗ ನೆನಪಿಸುತ್ತ ತೃಪ್ತಿಯ ನಗೆಬೀರುತ್ತಾರೆ. ನಡೆನುಡಿ ಎರಡೂ ಚೆನ್ನಾಗುವುದು ಮಾತ್ರವಲ್ಲ ಚಿನ್ನವಾಗಿಸುತ್ತ ಮುನ್ನಡೆಯುತ್ತಾರೆ. ಅಂಗವಿರಹಿತನಾಗಿ ಸಿದ್ದರಾಮನು ಸನ್ನಿಧಿಗೆ ಶರಣಾರ್ಥಿ ಸಲ್ಲಿಸುತ್ತಿದ್ದನು. ಷಟ್ಸ್ಥಲ ಜ್ಞಾನ, ಅರ್ಚನೆ ಆರೋಘಣೆ, ಸೋಹವಿಲ್ಲದ ದಾಸೋಹ ಮುಂತಾದ ಶರಣ ನಡೆದುದೆ ಪಾವನತರವೆನುವಂತೆ ತಮ್ಮ ದಿನಚರಿಯು ಮುಂದುವರಿಯುತ್ತಿತ್ತು. ಶರಣರ ನಡುವೆ ಶರಣಾರ್ಥಿ ಸಲಿಸುತ್ತ ಶಿವಾನುಭವವನ್ನು ಮಠದಲ್ಲಿ ಪ್ರಾರಂಭಿಸಿದ್ದನು. ಗುರು ಲಿಂಗ ಜಂಗಮಗಳ ಅರಿವಿಗೆ ಜಂಗತ್ವ ಪ್ರಯೋಗಿಸುತ್ತಿದ್ದರೆ ಇವರ ವಾಗ್ವೈಖರಿಗೆ ಮನಸೋಲದವರಿಲ್ಲ. ವೈರಾಗ್ಯ ಸುಜ್ಞಾನ ಸಾಧನೆಯು ಮುಂದೆ ಮಹತ್ತರ ಸಾಧಕನಾಗುವುದರ ಮುನ್ಸೂಚನೆಯೇ ಸಿಗಲಾರಂಭಿಸಿತು. ಹಂಪಿ, ಬೇಲೂರು ಹಳೇಬೀಡು ಲಕ್ಕುಂಡಿ ಮುಂತಾದ ಸ್ಥಳಗಳಿಗೆ ಭೇಟಿ ನೀಡಿ ತೌಲನಿಕವಾಗಿ ದೈವದ ಪರಿಕಲ್ಪನೆಯನ್ನು ಆಲೋಚಿಸಿದರು.

ಸಿದ್ದರಾಮನು ಪಡೆದ ಜ್ಞಾನ ಸಂಪತ್ತಿಗೆ ಗದುಗಿನ ತೋಂಟದಾರ್ಯ ಮಠಕ್ಕೆ ಖುದ್ದಾಗಿ ನೇಮಿಸುವಂತಾಯಿತು. ಸಿಂಧಗಿಯ ಜನರು ಒಂದಡೆ ಬರಬೇಕೆಂದು ಭಾವಿಸಿದರೆ, ಮೂಜಗಂ ಗುರುಗಳಿಗೆ ಮಠದ ವಾರಸುದಾರಿಕೆಯನ್ನು ವಹಿಸುವ ಸನ್ನಾಹದಲ್ಲಿದ್ದರು. ಸ್ವಾತಿ ಮಳೆಹನಿಯು ಮುತ್ತಾಗುವಂತೆ ಸಕಲ ಪಾರಂಗತನಾದುದರಿಂದ ಲೇಸನೆ ಮನಬಯಸಿದಂತೆ ತೋಂಟನಡಿ ಕಂಗೊಳಿಸುವ ಬೆಳಸಾಗಿ ಬೆಳೆಯಲಾರಂಭಿಸಿದ್ದರು. ತೋಂಟದ ಮಠದ ಪೀಠವನೇರಿದ ಮೇಲೆ ನಿರಂಜನ ಪ್ರಣವ ಸ್ವರೂಪಿ ಸಿದ್ದಲಿಂಗನೆಂಬ ಅಭಿದಾನವನ್ನು ಶೂನ್ಯಸಿಂಹಾಸನದ ಮೇಲೆ ಕುಳಿತಂತಹ ಅನುಭವದಿಂದ ರಾಜಕೀಯ, ವ್ಯವಹಾರಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಮುಂತಾದ ಎಲ್ಲ ವಲಯಗಳಲ್ಲೂ ಕಲುಷಿತಗೊಂಡಂತೆ ಕಾಣಿಸುತ್ತದೆ. ಸಿಂಧಗಿಯ ಸಂಬಂಧವನ್ನು ಕಳಚಿಕೊಳ್ಳಲು ಪ್ರಾರಂಭಿಸುತ್ತಾರೆ. ಅದಕ್ಕೋಸ್ಕರ ಪರಿತಪಿಸುವುದೂ ಕಂಡುಬರುತ್ತದೆ. ಗದುಗಿನ ಮಠದ ಮೇಲೆ ವಿರಾಜಮಾನರಾಗುತ್ತಿದ್ದಂತೆ ಮಠಕ್ಕೆ ವಿಶೇಷವಾದ ಕಳೆಯು ಬರತೊಡಗುತ್ತದೆ. ಎಲ್ಲೆಡೆಯೂ ಗೌರವ ಸಲ್ಲುವಂತೆ ನಡೆದುಕೊಳ್ಳುವ ನಡೆನುಡಿಯಿಂದಾಗಿ ಭಕ್ತಭಾಜನರಾಗುತ್ತಾರೆ. ಜಂಗಮತ್ವ ಸಂಪಾದನೆಯೊಂದಿಗೆ ಕೃಷಿ ಚಟುವಟಿಕೆಗಳ ಕಡೆಗೆ ಗಮನ ಹರಿಸುವರು. ಕೃಷಿಕರಿಗೆ ಮಾರ್ಗದರ್ಶನ ಕೆಲಸವನ್ನೂ ನಿರ್ವಹಿಸುತ್ತಾರೆ. ಕಾರ್ಯಕ್ಷಮತೆಯ ಯೋಗವೇ ಶಿವಯೋಗವೆಂಬಂತೆ ಕಾಯಕ ತತ್ವಕ್ಕೆ ಮನ್ನಣೆ ನೀಡುತ್ತಾರೆ. ಅದಕ್ಕೋಸ್ಕರ ವಿವಿಧ ರಾಜ್ಯ, ರಾಷ್ಟ್ರಗಳ ಪ್ರವಾಸ ಕೈಗೊಳ್ಳುತ್ತಾರೆ.

ನಿರಂಜನ ಪ್ರಣವ ಸ್ವರೂಪಿ ಸಿದ್ದಲಿಂಗದೇವನು ತೋಂಟದ ತೀರ್ಥಮಯ ಪೀಠದಲ್ಲಿ ನಡೆನುಡಿ ಎಲ್ಲವೂ ಶುದ್ಧವೆನ್ನುವಂತೆ ನಡೆದುಕೊಳ್ಳುವುದರಿಂದ ಇವರ ಹಮ್ಮು ಬಿಮ್ಮುಗಳಿಲ್ಲದ ಚಾರಿತ್ರ್ಯ ಎಲ್ಲರಿಗೂ ಸರಸವಾಗುತ್ತದೆ. ಜ್ಞಾನದ ಹಸಿವನ್ನು ಇಂಗಿಸಿಕೊಳ್ಳಲು ಬುದ್ದ, ಬಸವ, ಗಾಂಧೀಜಿ ಮುಂತಾದ ಮಹನೀಯರ ಕೃತಿಗಳ ಅಧ್ಯಯನಕ್ಕೆ ತೊಡಗುವರು. ಮಠದಲ್ಲಿ ಸರ್ವಧರ್ಮ ಸಮನ್ವಯ ಸಭೆ ನಡೆಸುವುದು, ವಿವಿಧ ಭಾಷೆಗಳ ಪರಿಚಯವಾದುದು, ಶಿವಾನುಭವ ಕುರಿತಾದ ಚರ್ಚೆಗಳ ಒಡನಾಟದಿಂದ ಮನಸ್ಸು ಇನ್ನಷ್ಟು ಪರಿಪಕ್ವವಾಯಿತು. ಮಠದಲ್ಲಿ ಸಾಹಿತ್ಯ ಸಂಗೀತ ಕಲೆ, ಮುಂತಾದ ಗೋಷ್ಠಿಗಳು, ಜಯಂತಿ ಆಚರಣೆಗಳು, ದೇನಂದಿನ ಚಟುವಟಿಕೆಗಳಾದುವು. ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮುಖೇನ ಜನಸಾಮಾನ್ಯರಿಗೆ ಶಿಕ್ಷಣ ದೊರೆಯುವಂತಾದುದು ಪ್ರಧಾನವಾಯಿತು.

ಮುಂದೆ ಸಿದ್ಧಲಿಂಗರ ಪಂಡಿತತೆಯನ್ನು ಗಮನಿಸಿ ಮಠಮಾನ್ಯಗಳು ಪ್ರವಚನ ನೀಡಲು ಆಹ್ವಾನಿಸಲಾರಂಭಿಸಿದರು. ಅಂತಹ ವಿಶಿಷ್ಠ ಕಾರ್ಯಕ್ರಮಗಳಲ್ಲಿ ಹುಬ್ಬಳ್ಳಿಯ ಸಿದ್ಧಾರೂಡ ಮಠದಲ್ಲಿ ನೀಡಿದ ಉಪನ್ಯಾಸದಲ್ಲಿ ಆಳವಾದ ಅಧ್ಯಯನ ಮತ್ತು ಪರಿಶ್ರಮಗಳು ಎದ್ದುಕಾಣುತ್ತಿದ್ದವು. ಗ್ರಂಥಗಳ ಲೋಕಾರ್ಪಣೆಗಳ ಮೂಲಕ ಪುಸ್ತಕದ ಅಭಿರುಚಿ ಹೆಚ್ಚಿಸಿದರು. ವಿವಿಧ ವಿದ್ವಾಂಸರನ್ನು ಮಠಕ್ಕೆ ಆಹ್ವಾನಿಸಿ ಅವರಿಂದ ವಿಶೇಷ ಉಪನ್ಯಾಸ ಕೊಡಿಸುವುದು ಅವರೊಡನೆ ಒಡನಾಟವಿಟ್ಟುಕೊಳ್ಳುವ ಮುಖೇನ ಅನುಭವ ಶ್ರೀಮಂತಿಕೆಯನ್ನು ಅಧಿಕಗೊಳಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಸನ್ನಿಧಿಯ ನುಡಿಶ್ರೇಣಿಗಳನ್ನಾಡುತ್ತ ಮಠದ ಕೀರ್ತಿಯನ್ನು ಇನ್ನಷ್ಟು ಉನ್ನತಮಟ್ಟಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾದರು. ಅವಿರತಶ್ರಮ, ಭಕ್ತಿಭಾವ, ಚಾರಿತ್ರಯ ಚಿಂಥನ ಮಂಥನ ಇವೆಲ್ಲವುಗಳ ಸಮತೋಲನ ಕಾಯ್ದುಕೊಂಡು ಅವರ ನಡೆನುಡಿಗಳು ಎಲ್ಲರಿಗೂ ಪ್ರಿಯವಾದವು. ಶರಣರ ಜೊತೆಗೆ ಇನ್ನಿತರ ಪರಂಪರೆಯ ಕವಿಗಳನ್ನು ಕಾವ್ಯಗಳನ್ನು ಮುಖಾಮುಖಿಯಾಗಿಸಿ ಧಾರ್ಮಿಕ ನಿರಪೇಕ್ಷತೆಯನ್ನು ಮರೆದರು. ಇದರಿಂದ ಮಠಕ್ಕೆ ಮತ್ತಷ್ಟು ಮೆರುಗು ಬಂದಿತು.

ಸ್ತ್ರೀಯರ ಬಗೆಗಿನ ಗೌರವ ಭಾವದ ಜೊತೆಗೆ ಅವರ ಕಾಳಜಿ ಮಾಡುವುದು ಕಂಡುಬರುತ್ತದೆ ಈ ಕಾವ್ಯದಲ್ಲಿ . ಪ್ರತಿ ವರ್ಷವೂ ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸುವ ಮೂಲಕ ಸತ್ಸಂಪ್ರದಾಯಕ್ಕೆ ನಾಂದಿ ಹಾಡಿದರು. ಅಲ್ಲದೆ ಸ್ತ್ರೀತ್ವದ ಬಗ್ಗೆ ಉಪನ್ಯಾಸ ಮಾಡುವುದು ಸೇರಿದಂತೆ ವಿಶಿಷ್ಟ ವಿನೂತನವೆನಿಸುವ ಕಾರ್ಯಕ್ರಮಗಳ ಮೂಲಕ ಗಮನಸೆಳೆದರು. ಹನ್ನೆರಡನೇ ಶತಮಾನದ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಇಂಬು ನೀಡುವಂತೆ ಮಾತಿನ ಮೂಲಕ ಎಲ್ಲೆಡೆಯೂ ಎಲ್ಲರನ್ನೂ ಸಮ್ಮೋಹನಗೊಳಿಸುವ ಶಕ್ತಿವಂತರು ಎನ್ನುವುದು ಕಾವ್ಯದಿಂದ ಮನದಟ್ಟಾಗುತ್ತದೆ. ಇಲ್ಲಿ ಬರುವ ಎಲ್ಲಾ ಉಲ್ಲಾಸಗಳೂ ಸಹೃದಯ ಮನಸ್ಸುಗಳಿಗೆ ಮನೋಲ್ಲಾಸವನ್ನುಂಟು ಮಾಡುತ್ತವೆಂಬುದರಲ್ಲಿ ಅತಿಶಯೋಕ್ತಿಯಲ್ಲ. ಸಿದ್ದರಾಮನು ಸಿದ್ದಲಿಂಗನಾಗಿ ಬೆಳೆಯುವ ಆಧ್ಯಾತ್ಮಿಕ ಪಯಣ ಮನಮೋಹಕವಾಗಿದ್ದು ದೇಸೀ ಛಂದಸ್ಸಿನಲ್ಲಿ ಅರಳಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಬಸವದರ್ಶನವೇ ಜೀವನದ ಅಚಿತಿಮಸಾರವೆಂಬಂತೆ ವ್ರತವಾಗಿಸಿಕೊಂಡ ಶ್ರೀ ಮ.ನಿ.ಜ ಡಾ.ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳಿಗೆ ಕರ್ನಾಟಕ ಸರ್ಕಾರ ಕೊಡಮಾಡುವ 2009ರ **'ಬಸವಪುರಸ್ಕಾರ'** ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಾಮಾನ್ಯರ ಸ್ವಾಮೀಜಿ ಎಂದು ಪ್ರಕೀರ್ತಿತರಾದರೂ ಅಸಾಮಾನ್ಯ ವ್ಯಕ್ತಿತ್ವವಾಗಿ ಕಂಗೊಳಿಸಿದ್ದಾರೆ.

**ಉಪಸಂಹಾರ/ಕೊನೆಯ ಮಾತು**

ಬಯಲೋಲ್ಲಾಸದಲ್ಲಿ ಸಾಮಾಜಿಕ ಸಂವೇದನೆ, ವಿದೇಶಿ ಪ್ರವಾಸದ ಅನುಭವ, ಜಾನಪದೀಯ ನೆಲೆಗಳು, ಮಾನವೀಯ ಮೌಲ್ಯಗಳು ಮನುಷ್ಯನಲ್ಲಿ ಪ್ರಕಟವಾಗುವ ಬಗೆ, ಪ್ರಕೃತಿ ಪರಿಸರವನ್ನು ಕುರಿತಾದ ನಿಲುವುಗಳು, ಕೃಷಿ ಚಟುವಟಿಕೆ, ಶಿವಾನುಭವಗೋಷ್ಠಿ, ಸಮಕಾಲೀನ ಸಂವೇದನೆಗಳನ್ನು ಈ ಕೃತಿಯು ಅನಾವರಣಗೊಳಿಸುತ್ತದೆ. ಇದರ ವಸ್ತುವಿನ್ಯಾಸವು ಆಧ್ಯಾತ್ಮಿಕತೆಯನ್ನು ಆಶಯವನ್ನಾಗಿ ಒಳಗೊಂಡಿದೆ. ಧಾರ್ಮಿಕ ನಿರಪೇಕ್ಷತೆಯು ಸಮಕಾಲೀನ ಬದುಕಿಗೆ ಅನಿವಾರ್ಯವಾದ ಸಂಗತಿಯಾಗಿದ್ದು ಕೃತಿಯಲ್ಲಿ ವಿಜೃಂಭಿಸಿದೆ. ತೋಂಟದಾರ್ಯರ ವ್ಯಕ್ತಿತ್ವದ ಅನಾವರಣವನ್ನು ತುಂಬಾ ಸೊಗಸಾಗಿ ಮಾಡುತ್ತದೆ. ನಿರುಪಾಧೀಶ್ವರ ಸ್ವಾಮಿಗಳ ಈ ಮಹಾಕಾವ್ಯದಲ್ಲಿ ವಿವೇಚನೆ ವಿವೇಕಗಳ ಸಮಾಗಮದಿಂದ ಈ ಕೃತಿಯು ಆಧ್ಯಾತ್ಮಿಕ ಅನೂಭೂತಿಯುಳ್ಳವರಿಗೆ ವಿಶೇಷವೆನಿಸುತ್ತದೆ.

**ಗ್ರಂಥಋಣ**

೧. ಬಯಲೋಲ್ಲಾಸ–ಡಾ.ತೋಂಟದ ಸಿದ್ದಲಿಂಗಸ್ವಾಮಿಗಳು